ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 1, March-April 2025, Pp. 14-20
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಸ್ವಾತಂತ್ರ್ಯ ಪೂರ್ವ ಮಹಿಳಾ ಶಿಕ್ಷಣದ ವ್ಯವಸ್ಥೆ

**ಶ್ರೀದೇವಿ ಮಿಟ್ಟಿ ತಂದೆ ಜಂಬಣ್ಣ ಮಿಟ್ಟಿ[1] ಮತ್ತು ಡಾ. ಎಸ್.ಎ. ಗೋವರ್ಧನ[2]**

[1]ಸಂಶೋಧನಾ ವಿದ್ಯಾರ್ಥಿ, ಗ್ರಾಮೀಣಾಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿಸ್ತರಣಾ ಕೇಂದ್ರ, ದೇವದುರ್ಗ

[2]ಸಹಾಯಕ ಪ್ರಾಧ್ಯಾಪಕರು, ಗ್ರಾಮೀಣಾಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿಸ್ತರಣಾ ಕೇಂದ್ರ, ದೇವದುರ್ಗ

**Abstract:**

*ದೇಶದ ಅಭಿವೃದ್ಧಿಗೆ ಪುರುಷರ ಪಾತ್ರ ಎಷ್ಟು ಮುಖ್ಯವೋ ಮಹಿಳೆಯರ ಪಾತ್ರವೂ ಅಷ್ಟೇ ಪ್ರಮುಖವಾಗಿದೆ. ಅದೆಷ್ಟೋ ದೇಶಗಳಲ್ಲಿ ಮಹಿಳೆಯರು ಪುರುಷರಿಗೆ ಸರಿಸಮಾನವಾಗಿ ಅಭಿವೃದ್ಧಿ ಹಾಗೂ ರಾಷ್ಟ್ರ ನಿರ್ಮಾಣ ಕಾರ್ಯಗಳಲ್ಲಿ ಭಾಗವಹಿಸಲು ಸಾಧ್ಯವಿಲ್ಲ. ಕಾರಣ ಮಹಿಳೆಯು ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಹಿಂದುಳಿದಿರುವುದು. ಇದರಿಂದಾಗಿ ಇತ್ತೀಚಿನ ದಿನಮಾನಗಳಲ್ಲಿ ಶಿಕ್ಷಣ ತಜ್ಞರು, ರಾಜಕಾರಣಿಗಳು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಜ್ಞರು ಮಹಿಳಾ ಸಮಾನತೆಗೆ ಹೆಚ್ಚು ಆದ್ಯತೆಯನ್ನು ಕೊಡುತ್ತಿದ್ದಾರೆ. ಮಹಿಳೆಯರಿಗಾಗಿ ರಾಜಕೀಯ ಕ್ಷೇತ್ರದಲ್ಲಿ ಕೆಲವು ಸ್ಥಾನಮಾನಗಳನ್ನು ಮೀಸಲಿಟ್ಟರೂ ಸಹ ಮಹಿಳಾ ಸಮಾನತೆ ಸಾಧ್ಯವಾಗುತ್ತಿಲ್ಲ. ಇದಕ್ಕೆ ಕಾರಣ ಪುರುಷರು ಅಂದರೆ ವಿವಿಧ ರಾಜಕೀಯ ಕ್ಷೇತ್ರಗಳಲ್ಲಿ ಆಯ್ಕೆಯಾದ ಹೆಣ್ಣು ಮಕ್ಕಳ ಕುಟುಂಬದವರೇ ಆಡಳಿತ ನಡೆಸುತ್ತಿರುವುದು. ಇದರಿಂದಾಗಿ ರಾಜಕೀಯ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಕೇವಲ ಸ್ಥಾನಮಾನ ಕೊಡುವುದರ ಮೂಲಕ ಮಹಿಳಾ ಸಮಾನತೆ ಸಾಧ್ಯವಿಲ್ಲ. ಆದ್ದರಿಂದ ಮಹಿಳೆಯರಿಗಾಗಿ ಇನ್ನೂ ಹೆಚ್ಚಿನ ರೀತಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ಅವುಗಳನ್ನು ಕಾರ್ಯರೂಪಕ್ಕೆ ತರುವುದು ಅಗತ್ಯವಾಗಿದೆ.*

**Keywords:** *ಸ್ವಾತಂತ್ರ್ಯ ಪೂರ್ವ, ಮಹಿಳೆಯರು, ಶಿಕ್ಷಣ ವ್ಯವಸ್ಥೆ, ಚಾರ್ಲ್ಸ್ ವುಡ್, ಸ್ಯಾಡ್ಲರ್ ಆಯೋಗ, ಹಾರ್ಟಾಗ್ ಆಯೋಗ, ಸಾರ್ಜೆಂಟ್ ಆಯೋಗ.*

## ಪೀಠಿಕೆ

ಪ್ರಸ್ತುತ ದಿನಮಾನಗಳಲ್ಲಿ ನಾವು ದಿನಪತ್ರಿಕೆ ಹಾಗೂ ಟಿ.ವಿ. ಮಾಧ್ಯಮಗಳಲ್ಲಿ ನೋಡುತ್ತಲೇ ಇದ್ದೇವೆ. ದಿನನಿತ್ಯವೂ ಮಹಿಳೆಯರ ಮೇಲೆ ಒಂದಲ್ಲ ಒಂದು ರೀತಿಯ ಶೋಷಣೆ ದೌರ್ಜನ್ಯಗಳಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಇಂತಹ ಸಮಸ್ಯೆಗಳಿಗೆ ಒಳಗಾದ ಅಪ್ರಾಪ್ತ ವಯಸ್ಸಿನ ಹೆಣ್ಣುಮಕ್ಕಳು ವಿದ್ಯಾವಂತ ಹಾಗೂ ಅವಿದ್ಯಾವಂತ ಮಹಿಳೆಯರು ಇಂತಹ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ಇಂದಿಗೂ ಒದ್ದಾಡುತ್ತಿರುವುದನ್ನು ಕಾಣಬಹುದಾಗಿದೆ. ಇದರಿಂದಾಗಿ ಹೆಣ್ಣುಮಕ್ಕಳಿಗೆ ಶಿಕ್ಷಣ ಹಾಗೂ ಮೂಲಭೂತ ಹಕ್ಕುಗಳು ಮತ್ತು ಮೂಲಭೂತ ಕರ್ತವ್ಯಗಳ ಕುರಿತಾಗಿ ಸ್ಪಷ್ಟ

***Please cite this article as:*** ಶ್ರೀದೇವಿ ಮಿಟ್ಟಿ ತಂದೆ ಜಂಬಣ್ಣ ಮಿಟ್ಟಿ ಮತ್ತು ಎಸ್.ಎ. ಗೋವರ್ಧನ. (2025). ಸ್ವಾತಂತ್ರ್ಯ ಪೂರ್ವ ಮಹಿಳಾ ಶಿಕ್ಷಣದ ವ್ಯವಸ್ಥೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(1), 14–20

ಮಾಹಿತಿಯ ಅಗತ್ಯವಿದೆ. ಅಷ್ಟೇ ಅಲ್ಲದೆ ಮಹಿಳೆಯು ತನ್ನ ಮೇಲೆ ಆಗುತ್ತಿರುವಂತಹ ಶೋಷಣೆ, ದೌರ್ಜನ್ಯ ಇತ್ಯಾದಿ ತೊಂದರೆಗಳಿಗೆ ಒಳಗಾದಾಗ ಅದಕ್ಕೆ ಪರಿಹಾರವಾಗಿರುವ ಸರ್ಕಾರದ ಉಚಿತ ಕಾನೂನು ಸೌಲಭ್ಯಗಳ ಕುರಿತು ತಿಳಿಯಲು ಹಾಗೂ ಸೌಲಭ್ಯಗಳನ್ನು ಪಡೆಯಲು ಅವಳಿಗೆ ಶಿಕ್ಷಣವು ಬಹಳ ಅವಶ್ಯವಾಗಿದೆ. ಇದರಿಂದಾಗಿ ವಿವಿಧ ರೀತಿಯ ತೊಂದರೆಗಳಿಗೆ ಒಳಗಾದಾಗ ಅವುಗಳ ವಿರುದ್ಧ ಹೋರಾಡಲು ಸಾಧ್ಯವಾಗುತ್ತದೆ. ಕೆಲವು ರಾಷ್ಟ್ರಗಳಲ್ಲಿ ಮಹಿಳೆಯು ಪುರುಷರಿಗೆ ಸರಿಸಮಾನವಾದ ಅವಕಾಶಗಳನ್ನು ಪಡೆದುಕೊಂಡು ಪುರುಷರಿಗೆ ಸಮನಾಗಿ ಜೀವನ ಸಾಗಿಸುತ್ತಿರುವುದನ್ನು ಕಾಣಬಹುದು. ಆದರೆ ನಮ್ಮ ದೇಶದಲ್ಲಿ ಸ್ತ್ರೀ ಪುರುಷರ ಕಲ್ಯಾಣಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದರೂ ನಿಷ್ಪ್ರಯೋಜಕವಾಗಿವೆ ಅಂದರೆ ತಪ್ಪಾಗಲಾರದು. ಕಾರಣ ನಮ್ಮ ಸಮಾಜವು ಪುರುಷ ಪ್ರಧಾನ ಸಮಾಜವಾದ್ದರಿಂದ ಮಹಿಳೆಯರಿಗೆ ದೊರಕುವ ಪ್ರಾಧಾನ್ಯತೆ ಕಡಿಮೆಯಾಗಿದೆ. ಇದರಿಂದಾಗಿ ಮಹಿಳೆಯರು ಪುರುಷನಷ್ಟೇ ಸರಿಸಮಾನವಾಗಿ ಬದುಕಲು ಅವರಿಗೆ ಶಿಕ್ಷಣದ ಅವಶ್ಯಕತೆಯು ಅಗತ್ಯವಾಗಿದೆ. ಇದರಿಂದ ಮಹಿಳೆಯರು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಸಬಲರಾಗಲು ಸಾಧ್ಯವಾಗುತ್ತದೆ.

**ಸ್ವಾತಂತ್ರ್ಯ ಪೂರ್ವ ಮಹಿಳಾ ಶಿಕ್ಷಣ**

ನಮ್ಮ ದೇಶದ ಪ್ರಾಚೀನ ಗ್ರಂಥಗಳನ್ನು ಓದಿದಾಗ ನಮಗೆ ತಿಳಿಯುವುದೇನೆಂದರೆ ಇವುಗಳಲ್ಲಿ ಹೆಣ್ಣುಮಕ್ಕಳು ಬ್ರಹ್ಮಚಾರ್ಯವನ್ನು ಪಾಲಿಸಲು ಅವಕಾಶವಿತ್ತು ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಅಲ್ಲದೆ ವೇದಾಭ್ಯಾಸ ಮಾಡುವುದರೊಂದಿಗೆ ಹೆಣ್ಣು ಪುರುಷರಿಗೆ ಸರಿಸಮಾನವಾಗಿ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಅವಕಾಶವಿತ್ತು. ಹಾಗೂ ಈ ಸಂದರ್ಭದಲ್ಲಿ ಹುಡುಗಿಯರಿಗೆ ತಮಗೆ ಇಷ್ಟವಾದ ವರನನ್ನು ಆಯ್ಕೆ ಮಾಡಿಕೊಂಡು ಮದುವೆಯಾಗುವ ಅವಕಾಶವಿತ್ತು. ಹಾಗೂ ವೇದಗಳ ಅಧ್ಯಯನದಲ್ಲಿ ತೊಡಗಿಸಿಕೊಳ್ಳಲು ಸಹ ಅವಕಾಶವಿತ್ತು. 'ಮಹರ್ಷಿ ಮನು' ಒಂದೆಡೆ ಮಹಿಳೆಯರನ್ನು ಆಡಳಿತಗಾರರಾಗಿ, ನ್ಯಾಯಾಧೀಶರಾಗಿ ಹಾಗೂ ಸತ್ಯಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುವವರಾಗಿ ಪ್ರತಿಬಿಂಬಿಸಿದ್ದಾನೆ.

ಹಾಗೆಯೇ ಮಕ್ಕಳ ಜೀವನದಲ್ಲಿ ತಂದೆಗಿಂತ ತಾಯಿಯ ಪಾತ್ರ ಪ್ರಮುಖವಾದದ್ದು ಎಂದು ಮನು ತಿಳಿಸಿದ್ದಾನೆ. ಹಾಗೆಯೇ "ಹೆಣ್ಣು ಎಲ್ಲಿ ಗೌರವಿಸಲ್ಪಡುತ್ತಾಳೆಯೋ ಅಲ್ಲಿ ದೇವತೆಗಳು ನೆಲೆಸುತ್ತಾರೆ, ಎಲ್ಲಿ ಹೆಣ್ಣು ಗೌರವಿಸಲ್ಪಡುವದಿಲ್ಲವೋ ಅಲ್ಲಿ ದೇವತೆಗಳು ಮುನಿಸಿಕೊಳ್ಳುತ್ತಾರೆ" ಎಂಬ ಮಾತನ್ನು ಸಹ ಮನು ಹೇಳಿದ್ದಾನೆ.

ಪುರಾತನ ಭಾರತದಲ್ಲಿ ಮಹಿಳೆಯರು ಉನ್ನತ ಶಿಕ್ಷಣವನ್ನು ಪಡೆಯುವುದರೊಂದಿಗೆ ವೇದಾಭ್ಯಾಸವನ್ನು ಮಾಡುತ್ತಿದ್ದರು ಎಂದು ಪೌರಾಣಿಕ ಕಥೆಗಳಲ್ಲಿ ಒಂದಾದ ಶತ್ಪದ ಬ್ರಾಹ್ಮಣರಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಹಾಗೆಯೇ ಪ್ರಾಚೀನ ಭಾರತದ ಪ್ರತಿಭಾನ್ವಿತ ಮಹಿಳೆಯರಾದ ಗಾರ್ಗಿ, ಮೈತ್ರಿಯಂತಹ ಮಹಿಳೆಯರು ಸಾವಿರಾರು ಜನ ಬುದ್ಧಿಜೀವಿ ಹಾಗೂ ಪ್ರತಿಭಾನ್ವಿತರ ಸಭೆಯಲ್ಲಿ ಯಾವುದೇ ಭಯವಿಲ್ಲದೆ ನಿರರ್ಗಳವಾಗಿ ಮಾತನಾಡಬಲ್ಲವರಾಗಿದ್ದರು. ವೇದಗಳ ಕಾಲದಲ್ಲಿನ ಕೆಲವು ಮಹಿಳಾ ವಿದ್ವಾಂಸರು ಅವಿವಾಹಿತರಾಗಿ ಉಳಿಯುವುದರೊಂದಿಗೆ ತಮ್ಮನ್ನು ತಾವು ಉನ್ನತ ವ್ಯಾಸಂಗದಲ್ಲಿ ದೀರ್ಘಕಾಲದವರೆಗೆ ತೊಡಗಿಸಿಕೊಂಡಿದ್ದರು. ಇಂಥವರಲ್ಲಿ ಪ್ರಮುಖರಾದವರು ವಿಶ್ವವೇರಾ ಅತ್ರೇಯಿ, ಅಪಲಾ ಅತ್ರೇಯಿ, ಇಂದ್ರಾಣಿ, ಕರಿವತಿ ಘೋಷ್, ಸೂರ್ಯ ಸಾವಿತ್ರಿ, ದಕ್ಷಿಣ ಪ್ರಜಾಪತಿ, ವಾಕ ಅಂಬ್ರಿನಿ ಮತ್ತು ರತ್ರಿ ಭಾರದ್ವಾಜ್ ಮುಂತಾದವರು. ಇವರು ವೇದಗಳಿಗೆ ಮಂತ್ರಗಳನ್ನು ರಚಿಸಿದವರಾಗಿದ್ದಾರೆ.

ನಾವಿಲ್ಲಿ ಋಗ್ವೇದವನ್ನು ಗಮನಿಸುವುದಾದರೆ ಅದರಲ್ಲಿ ಅನೇಕ ಮಂತ್ರಗಳನ್ನು ವಿವಿಧ

ಮಹಿಳೆಯರು ರಚಿಸಿರುವುದನ್ನು ಕಾಣಬಹುದಾಗಿದೆ. ಈ ಋಗ್ವೇದ ಕಾಲದಲ್ಲಿ ಗಾರ್ಗಿ, ಮೈತ್ರಿಯರು ತತ್ವಶಾಸ್ತ್ರದಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದರು. ಅಷ್ಟೇ ಅಲ್ಲದೆ ಈ ಕಾಲಘಟ್ಟದಲ್ಲಿನ ಹಲವಾರು ಮಹಿಳೆಯರು ವೇದೋಪನ್ಯಾಸವನ್ನು ತಮ್ಮ ವೃತ್ತಿಯಾಗಿಸಿಕೊಂಡಿದ್ದರು. ಹಾಗಾಗಿ ಇಲ್ಲಿ ಹೆಣ್ಣು ಮಕ್ಕಳಿಗಾಗಿಯೇ ಮಹಿಳಾ ಆಧ್ಯಾಪಕರ ಮೇಲ್ವಿಚಾರಣೆಯಲ್ಲಿ ವಸತಿ ನಿಲಯಗಳನ್ನು ಸ್ಥಾಪಿಸಲಾಗಿತ್ತು. ಅಷ್ಟೇ ಅಲ್ಲದೆ ಬೌದ್ಧ ಕುಟುಂಬಗಳಲ್ಲಿನ ಹಲವಾರು ಮಹಿಳೆಯರು ತಮ್ಮ ಧರ್ಮ ಹಾಗೂ ತತ್ವಗಳ ಪ್ರಚಾರಕ್ಕಾಗಿ ಬ್ರಹ್ಮಚಾರಿಣಿಯರಾಗಿ ಉಳಿದಿದ್ದರು. 8 ನೇ ಶತಮಾನದ ಹೆಸರಾಂತ ವಿದ್ವಾಂಸರಾದ 'ಭವಭೂತಿ'ಯು ತನ್ನ ಕೃತಿಯಾದ 'ಉತ್ತರಾಮಚರಿತ್ರೆ'ಯಲ್ಲಿ ಹೆಣ್ಣು ಮಕ್ಕಳಿಗೆ ಉಪನಯನ ಮಾಡುವುದರೊಂದಿಗೆ ಜನಿವಾರ ಧರಿಸಿ ಬ್ರಹ್ಮಚಾರಿಣಿಗಳಾಗಿ ಜೀವನ ನಡೆಸಲು ಅವಕಾಶವಿತ್ತು. ಹಾಗೂ ಹೆಣ್ಣು ಮಕ್ಕಳಿಗೆ ಗಂಡು ಮಕ್ಕಳಂತೆಯೆ ಸಮಾನ ಅವಕಾಶವಿತ್ತು ಎಂದು ಈ ಕೃತಿಯಲ್ಲಿ ಉಲ್ಲೇಖವಿದೆ. ಈ ಕಾಲಘಟ್ಟದಲ್ಲಿ ಅದೆಷ್ಟೋ ಜನ ಮಹಿಳೆಯರು ಅನೇಕ ಬಾರಿ ರಾಜದರ್ಬಾರಿನಲ್ಲಿ ಪುರುಷರಿಗೆ ಸವಾಲುಗಳನ್ನೊಡ್ಡಿ ಗೆಲುವು ಸಾಧಿಸಿದ ಅನೇಕ ಘಟನೆಗಳನ್ನು ಕಾಣಬಹುದಾಗಿದೆ. ಉದಾಹರಣೆಗೆ ಬೃಹದಾರಣ್ಯಕ ಉಪನಿಷತ್ತಿನಲ್ಲಿ ಗಾರ್ಗಿಯು ವಿದೇಹದ ರಾಜನಾದ ಜನಕನ ಆಸ್ಥಾನದಲ್ಲಿ ಯಜ್ಞಾವಲ್ಕನಿಗೆ ಸವಾಲೊಡ್ಡಿ ಸೋಲಿಸಿದ ಘಟನೆಯನ್ನು ಯಜ್ಞಾವಲ್ಕನ ಈ ಉದ್ಗಾರರ ಮಾತುಗಳಿಂದ ತಿಳಿಯಬಹುದಾಗಿದೆ. ಅಂದರೆ "ಓ ಗಾರ್ಗಿ ನನ್ನನ್ನು ಇನ್ನು ಹೆಚ್ಚೇನು ಕೇಳಬೇಡ" ಎಂಬ ಮಾತಿನಿಂದ ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ. ನಂತರದ ಕಾಲಘಟ್ಟದಲ್ಲಿ ಅಂದರೆ 200 ರಿಂದ 1200 ರ ವರೆಗಿನ ಅವಧಿಯನ್ನು ನೋಡುವುದಾದರೆ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಅಡೆತಡೆಗಳು ಉಂಟಾದವು. ಅಲ್ಲದೆ ಹೆಣ್ಣು ಮಕ್ಕಳ ವಿವಾಹದ ವಯಸ್ಸನ್ನು ಕಡಿಮೆಗೊಳಿಸಲಾಯಿತು. ನಿಧಾನವಾಗಿ ಹೆಣ್ಣು ಮಕ್ಕಳು ಉಪನಯನ ಅವಕಾಶವನ್ನು ಕಳೆದುಕೊಳ್ಳುವುದರೊಂದಿಗೆ ವೇದ ಮಂತ್ರಗಳ ಪಠಣೆಯ ಅವಕಾಶವನ್ನು ಕಳೆದುಕೊಂಡರು. ಕೇವಲ ರಾಜಮನೆತನದ ಹೆಣ್ಣು ಮಕ್ಕಳು ಮಾತ್ರವೇ ಶಿಕ್ಷಣವನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಯಿತು.

ನಂತರ 1200 ರಿಂದ 1800 ರ ಕಾಲಾವಧಿಯಲ್ಲಿ ಮುಸ್ಲಿಂ ಅಧಿಕಾರಿಗಳ ಕಾಲಾವಧಿಯಾಗಿತ್ತು. ಈ ಅವಧಿಯಲ್ಲಿ ಹೆಣ್ಣು ಮಕ್ಕಳ ಸಾಕ್ಷರತೆಯ ಪ್ರಮಾಣವು ಅತಿ ಕಡಿಮೆಯಾಯಿತು. ಕಾರಣ ಈ ಮುಸ್ಲಿಂ ಸಮಾಜವು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಯಾವುದೇ ರೀತಿಯ ಪ್ರಾಮುಖ್ಯತೆಯನ್ನು ನೀಡಲಿಲ್ಲ. ಇದೇ ಸಂದರ್ಭದಲ್ಲಿ ಜಾರಿಯಾದ 'ಪರ್ದಾ ಪದ್ಧತಿ'ಯು ಹೆಣ್ಣು ಮಕ್ಕಳ ಶಿಕ್ಷಣ ಹಾಗೂ ಸ್ವತಂತ್ರಕ್ಕೆ ಅಡ್ಡಿಯನ್ನುಂಟುಮಾಡಿತು. ಕೇವಲ ಎಳೆಯ ವಯಸ್ಸಿನ ಬಾಲಕಿಯರಿಗೆ ಮಾತ್ರವೇ ಶಿಕ್ಷಣ ಪಡೆಯುವ ಅವಕಾಶವನ್ನು ಕಲ್ಪಿಸಲಾಗಿತ್ತು.

ಈ ಸಂದರ್ಭದಲ್ಲಿ ದೆಹಲಿ ಸುಲ್ತಾನರ ಆಡಳಿತಾವಧಿಯಲ್ಲಿ ಇದ್ದ ವಿದ್ಯಾವಂತ ಹಾಗೂ ಧೀರ ನಾರಿಯಾದ ರಜಿಯಾ ಸುಲ್ತಾನ್ ಎಂಬ ವೀರ ಮಹಿಳೆಯು ಎಲ್ಲಾ ರೀತಿಯ ವಿದ್ಯಾಭ್ಯಾಸ ಹಾಗೂ ಯುದ್ಧ ಕಲೆಗಳನ್ನು ಬಲ್ಲವಳಾಗಿದ್ದಳು. ಇಂತಹ ಮಹಿಳೆಗೆ ಅಂದಿನ ಪುರುಷ ಪ್ರಧಾನ ಸಮಾಜವು ಕಡೆಗಣಿಸಿರುವುದನ್ನು ನಾವು ಕಾಣಬಹುದಾಗಿದೆ. ತದನಂತರದಲ್ಲಿ 1800 ರಿಂದ 1854 ರ ಕಾಲಾವಧಿಯಲ್ಲಿ ಕ್ರೈಸ್ತ ಮಿಷನರಿಗಳು ಭಾರತದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಾಕಷ್ಟು ಪ್ರಾಮುಖ್ಯತೆಯನ್ನು ನೀಡುವುದರೊಂದಿಗೆ ಪ್ರೋತ್ಸಾಹವನ್ನು ನೀಡಿತು. ಇದರಿಂದ ಭಾರತದ ಹಲವಾರು ಮಹನೀಯರು ಹೆಣ್ಣುಮಕ್ಕಳ ಶಿಕ್ಷಣದ ಪ್ರತಿರೋಧದ ವಿರುದ್ಧ ಹೋರಾಡಿದರು. ಅಂತವರಲ್ಲಿ ಪ್ರಮುಖರಾದವರು ಆಧುನಿಕ ಭಾರತದ ಸಮಾಜ ಸುಧಾರಕರು ಮಹಿಳಾ

ಶಿಕ್ಷಣದ ಕುರಿತು ಹಲವಾರು ಹೋರಾಟಗಳನ್ನು ಮಾಡಿರುವುದು ಕಾಣಬಹುದಾಗಿದೆ. ಅವರಲ್ಲಿ ಪ್ರಮುಖರಾದವರು ಸಾವಿತ್ರಿಬಾಯಿ ಪುಲೆ, ಜ್ಯೋತಿಬಾಪುಲೆ, ರಾಜರಾಮ್ ಮೋಹನರಾಯ್, ಡಾ. ಬಿ. ಆರ್. ಅಂಬೇಡ್ಕರ್, ಈಶ್ವರ್ ಚಂದ್ರ ವಿದ್ಯಾಸಾಗರ್, ಆತ್ಮರಾಮ ಪಾಂಡುರಂಗ ಮುಂತಾದ ಹೋರಾಟಗಾರರು. ಹಾಗೂ ಅಂದಿನ ಗವರ್ನರ್ ಜನರಲ್ ಆದ ಲಾರ್ಡ್ ಡಾಲ್‌ಹೌಸಿಯು ಕೂಡ ಹೆಣ್ಣು ಮಕ್ಕಳು ಶಿಕ್ಷಣ ಪಡೆದರೆ ಮಾತ್ರ ಸಮಾಜದಲ್ಲಿ ಏನಾದರೂ ಬದಲಾವಣೆ ಕಾಣಲು ಸಾಧ್ಯವಾಗುತ್ತದೆ ಎಂದು ಹೇಳಿರುವುದನ್ನು ನಾವು ಕಾಣಬಹುದಾಗಿದೆ. 1906 ರಿಂದ 1910 ರಲ್ಲಿ ಭಾರತ ಸರ್ಕಾರವು ಅನೇಕ ರಾಜ್ಯಗಳಲ್ಲಿ ಶಿಕ್ಷಣವನ್ನು ಕಡ್ಡಾಯಗೊಳಿಸಲು ಮುಂದಾಯಿತು. ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಅನೇಕ ರೂಪದ ಜನ ಸಮುದಾಯಗಳು ಕಂಡುಬರುತ್ತವೆ. ಇದರಿಂದಾಗಿ ಹಲವಾರು ರೀತಿಯ ಜನ ವರ್ಗಗಳಿಗೆ ಶಿಕ್ಷಣ ನೀಡುವ ಪ್ರಯತ್ನವು ಸ್ವಾತಂತ್ರ್ಯ ಪೂರ್ವದಿಂದಲೂ ನಿರಂತರವಾಗಿ ನಡೆಯುತ್ತಿದೆ ಎಂಬುದನ್ನು ಅನೇಕ ಅಧ್ಯಯನಗಳು ಗುರುತಿಸಿವೆ. ಶಿಕ್ಷಣವನ್ನು ಮೂಲಭೂತವಾಗಿ ಸಮಾಜದಲ್ಲಿನ ಪ್ರತಿಯೊಬ್ಬರಿಗೂ ದೊರೆಯುವಂತಾಗಬೇಕು ಎನ್ನುವ ಉದ್ದೇಶದಿಂದ ಭಾರತ ಸರ್ಕಾರವು ಹಲವಾರು ಆಯೋಗಗಳನ್ನು ಜಾರಿಗೊಳಿಸಿರುವುದನ್ನು ನಾವು ಕಾಣಬಹುದಾಗಿದೆ.

ಭಾರತದಲ್ಲಿ ಬ್ರಿಟಿಷರ ಆಡಳಿತ ಸಂದರ್ಭದಲ್ಲಿ ಸಮಾಜ ಸುಧಾರಕರ ಹೋರಾಟದ ಪ್ರತಿಫಲವಾಗಿ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ನಿಟ್ಟಿನಲ್ಲಿ ಬ್ರಿಟಿಷ್ ಸರ್ಕಾರವು 1813 ರಲ್ಲಿ ಶಿಕ್ಷಣದ ಅಭಿವೃದ್ಧಿಗಾಗಿ ಪ್ರತಿ ವರ್ಷವೂ ಹಣ ಸಹಾಯ (1ಲಕ್ಷ) ನೀಡಲು ಸೂಚಿಸಿತು. ಹಾಗೆಯೇ 1817 ರಲ್ಲಿ ಈಗಿನ ಕೇರಳ ರಾಜ್ಯದ ಅಂದಿನ ಮಹಾರಾಣಿಯು ಸಹ ತಮ್ಮ ಆಡಳಿತದಲ್ಲಿ ಸುತ್ತೋಲೆ ಹಾಗೂ ಆದೇಶಗಳನ್ನು ಹೊರಡಿಸುವಾಗ ಅಲ್ಲಿನ ಪ್ರಜೆಗಳು ಎಲ್ಲದರಲ್ಲೂ ಸಕ್ರೀಯವಾಗಿ ಭಾಗವಹಿಸಬೇಕಾದರೆ ಅವರಿಗೆ ಶಿಕ್ಷಣದ ಅವಶ್ಯಕತೆ ತುಂಬಾ ಇದೆ ಎಂದು ಅರಿತುಕೊಂಡ ಮಹಾರಾಣಿಯು ತಮ್ಮ ಪ್ರಾಂತ್ಯದ ಎಲ್ಲಾ ಪ್ರಜೆಗಳಿಗೆ ಸಾರ್ವತ್ರಿಕ ಶಿಕ್ಷಣವನ್ನು ನೀಡುವಂತೆ ಘೋಷಿಸಿದಳು. ಸ್ವಾತಂತ್ರ್ಯ ಚಳುವಳಿಯ ಸಮಯದಲ್ಲಿ ನಾವು ತಿಳಿದುಕೊಳ್ಳಬೇಕಾದ ಮುಖ್ಯ ವಿಷಯವೆಂದರೆ ಯುದ್ಧ, ತ್ಯಾಗ, ಬಲಿದಾನಗಳಿಗಿಂತಲೂ ಚರ್ಚೆಗೆ ಒಳಪಟ್ಟ ವಿಷಯವೆಂದರೆ ಶಾಲಾ ಶಿಕ್ಷಣದ ಸಾರ್ವತ್ರಿಕರಣದ ಕುರಿತು ಹಲವಾರು ಶಿಕ್ಷಣ ನೀತಿಗಳನ್ನು, ಶಿಕ್ಷಣ ಆಯೋಗಗಳನ್ನು ಜಾರಿಗೊಳಿಸಲು ಸಿದ್ಧಗೊಳಿಸಿತು. 1886 ರಲ್ಲಿ ಇಂಗ್ಲೆಂಡಿನ ಸಮಾಜ ಸುಧಾರಕಿಯಾದ ಮೇರಿ ಕಾರ್ಪೆಂಟರವರು ಮಹಿಳಾ ಶಿಕ್ಷಣದ ಕುರಿತು ಸಂದರ್ಶನ ಮಾಡಲು ಭಾರತಕ್ಕೆ ಬಂದಳು. ಇವರ ಈ ಸಂದರ್ಶನವು ಭಾರತೀಯರ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿತು. ಹಾಗಾಗಿ ಭಾರತದಲ್ಲಿ ಮಹಿಳೆಯರಿಗಾಗಿಯೇ ಮೊಟ್ಟಮೊದಲ ಬಾರಿಗೆ ಮಹಿಳಾ ಶಿಕ್ಷಕಿಯರ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಅಷ್ಟೇ ಅಲ್ಲದೆ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಸ್ವಾತಂತ್ರ್ಯ ಪೂರ್ವದಿಂದಲೇ ಬ್ರಿಟಿಷರ ಆಡಳಿತದ ಅವಧಿಯಲ್ಲಿಯೇ ಅನೇಕ ರೀತಿಯ ಶಿಕ್ಷಣ ಆಯೋಗಗಳನ್ನು ಸಿದ್ಧಗೊಳಿಸುವುದರ ಮೂಲಕ ಹತ್ತು ಹಲವಾರು ಶಿಕ್ಷಣ ಆಯೋಗಗಳನ್ನು ಜಾರಿಗೊಳಿಸಲಾಯಿತು. ಹಾಗೆ ಈ ಆಯೋಗಗಳಲ್ಲಿ ಶಿಕ್ಷಣ ಅಭಿವೃದ್ದಿಗೆ ಅಡ್ಡಿ ಉಂಟು ಮಾಡುತ್ತಿರುವ ಸಮಸ್ಯೆಗಳ ಕುರಿತು ಕೆಲವು ಅಧ್ಯಯನಕಾರರಿಂದ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಈ ನಿಟ್ಟಿನಲ್ಲಿ ಕೆಲವು ಶಿಕ್ಷಣ ಆಯೋಗಗಳನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ಈಸ್ಟ್ ಇಂಡಿಯಾ ಕಂಪನಿಯು 19 ನೇ ಶತಮಾನದ ಮಧ್ಯ ಭಾಗದವರೆಗೆ ಭಾರತದಲ್ಲಿ ಶಿಕ್ಷಣ ಅಭಿವೃದ್ಧಿಯನ್ನು ನಿರ್ಲಕ್ಷಿಸಲಾಗಿತ್ತು. ಇದರಿಂದಾಗಿ ಇಲ್ಲಿನ ಕೆಲವು ಸದಸ್ಯರು ಅಂದರೆ ಈ ಕಂಪನಿಯ ಸದಸ್ಯರು ಭಾರತವನ್ನು ನಾಗರಿಕ ಸಮಾಜವನ್ನಾಗಿ

ಪರಿವರ್ತಿಸುವ ಮೂಲಕ ಭಾರತೀಯರಲ್ಲಿ ತ್ವರಿತ ಬದಲಾವಣೆಯನ್ನು ಮಾಡುವುದರ ಮೂಲಕ ಭಾರತೀಯರ ಮನಸ್ಥಿತಿಯನ್ನು ಪರಿವರ್ತಿಸಬೇಕು ಎಂಬ ಉದ್ದೇಶದಿಂದ 1854 ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ನಿಯಂತ್ರಣ ಮಂಡಳಿಯ ಅಧ್ಯಕ್ಷರಾದಂತಹ ಚಾರ್ಲ್ಸ್ ವುಡ್ ಎಂಬುವವರು ಶಿಕ್ಷಣದ ಕುರಿತು ಒಂದು ವರದಿಯನ್ನು ತಯಾರಿಸಿದರು. ನಂತರ ಅಂದಿನ ಗವರ್ನರ್ ಜನರಲ್ ಆಗಿ ಕಾರ್ಯನಿರ್ವಹಿಸುತ್ತಿರುವ ಲಾರ್ಡ್ ಡಾಲ್‌ಹೌಸಿಯವರಿಗೆ ಈ ವರದಿಯನ್ನು ಒಪ್ಪಿಸಲಾಯಿತು. ಈ ವರದಿಯಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅದರಲ್ಲೂ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಶಿಫಾರಸ್ಸುಗಳನ್ನು (ಸಲಹೆಗಳು) ನೀಡಲಾಗಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಮಹಿಳೆಯರ ಶಿಕ್ಷಣವನ್ನು ನಿರಂತರವಾಗಿ ಬೆಂಬಲಿಸಬೇಕು ಹಾಗೂ ಇಂಗ್ಲಿಷ್ ಭಾಷೆಯ ಬಳಕೆ ಕಡ್ಡಾಯವಾಗಿರಬೇಕು ಎಂದು ಶಿಫಾರಸು ಮಾಡಲಾಗಿದೆ.

ನಂತರದಲ್ಲಿ 1882 ರಲ್ಲಿ ಲಾರ್ಡ್ ವಿಲಿಯಂ ಹಂಟರ್ ಎಂಬುವವರ ನೇತೃತ್ವದಲ್ಲಿ ಭಾರತೀಯರ ಶಿಕ್ಷಣದ ಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕಾಗಿ ಈ ಆಯೋಗವು (ಹಂಟರ್ ಆಯೋಗ) ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಈ ವರದಿಯ ರಚನಾ ಸಭೆಯ ಕಾರ್ಯದರ್ಶಿಯಾಗಿ ಬಿ. ಎಲ್. ರೈಸ್ ಅವರನ್ನು ನೇಮಕ ಮಾಡಲಾಗಿತ್ತು. ಈ ಆಯೋಗದಲ್ಲಿಯೂ ಮಹಿಳಾ ಶಿಕ್ಷಣದ ಕುರಿತು ಕೆಲವು ಸಲಹೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಮುಖ್ಯವಾದವುಗಳು, ಮಹಿಳೆಯರಿಗೆ ಉಚಿತ ಶಿಕ್ಷಣ ನೀಡುವುದು ಹಾಗೂ ಮಹಿಳಾ ಶಿಕ್ಷಕರನ್ನು ನೇಮಕ ಮಾಡುವುದು, ಮತ್ತು ಹೆಣ್ಣು ಮಕ್ಕಳಿಗಾಗಿಯೇ ಪ್ರತ್ಯೇಕ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಬೇಕು. ಹಾಗೂ ಪರ್ದಾಪದ್ಧತಿಯನ್ನು ಹೊಂದಿರುವಂತಹ ಮಹಿಳೆಯರಿಗೆ ಪ್ರತ್ಯೇಕ ಶಿಕ್ಷಣದ ವ್ಯವಸ್ಥೆಯನ್ನು ಮಾಡಬೇಕು ಎಂದು ಹಲವಾರು ಸಲಹೆಗಳನ್ನು ಈ ವರದಿಯಲ್ಲಿ ನಾವು ಕಾಣಬಹುದಾಗಿದೆ.

**ಸ್ಯಾಡ್ಲರ್ ಆಯೋಗ (1917)**

ಈ ಸ್ಯಾಡ್ಲರ್ ಆಯೋಗವನ್ನು 1917 ರಲ್ಲಿ ರಚಿಸಲಾಯಿತು. ಈ ಆಯೋಗವನ್ನು ರಚಿಸಲು ಸುಮಾರು 17 ತಿಂಗಳುಗಳ ಕಾಲಾವಕಾಶವನ್ನು ತೆಗೆದುಕೊಳ್ಳಲಾಯಿತು. ಮುಖ್ಯವಾಗಿ ಸ್ಯಾಡ್ಲರ್ ಆಯೋಗವನ್ನು ಕಲ್ಕತ್ತಾ ವಿಶ್ವವಿದ್ಯಾಲಯವು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಶೀಲಿಸುವುದಕ್ಕಾಗಿ ಈ ವರದಿಯನ್ನು 1917 ರಲ್ಲಿ ಲೀಡ್ಸ್ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಎಂ.ಇ. ಸ್ಯಾಡ್ಲರ್ ರವರ ಅಧ್ಯಕ್ಷತೆಯಲ್ಲಿ ಈ ಆಯೋಗವನ್ನು ನೇಮಿಸಲಾಯಿತು. ಈ ಆಯೋಗದಲ್ಲಿ ಅ. ಸಂತೋಷ ಮುಖರ್ಜಿ ಮತ್ತು ಡಾ. ಜೀಯಾಉದ್ದೀನ್ ಅಹಮ್ಮದ್ ಎಂಬ ಇಬ್ಬರು ಭಾರತೀಯರು ಇದ್ದರು. ಈ ಆಯೋಗವು ಕಲ್ಕತ್ತಾ ವಿಶ್ವವಿದ್ಯಾಲಯದ ಬಗ್ಗೆ ಹೇಳುತ್ತದೆಯಾದರೂ ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಸ್ತಾಪಿಸಲಾದ ಸಮಸ್ಯೆಗಳೂ ಕೂಡ ಒಂದೇ ರೀತಿ ಇರುವುದರಿಂದ ಈ ಆಯೋಗ ನೀಡಿರುವ ಸಲಹೆಗಳನ್ನು ಎಲ್ಲಾ ಶಿಕ್ಷಣ ವ್ಯವಸ್ಥೆಗಳಿಗೂ ಅನ್ವಯಿಸಲ್ಪಟ್ಟಿದೆ. ಈ ಆಯೋಗದಲ್ಲಿಯೂ ಮಹಿಳಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೆಲವು ಸಲಹೆ ಸೂಚನೆಗಳನ್ನು ನೀಡಲಾಗಿರುತ್ತದೆ. ಅವು ಈ ಕೆಳಗಿನಂತಿವೆ. ಮಹಿಳೆಯರ ವಿದ್ಯಾಭ್ಯಾಸಕ್ಕಾಗಿ ಅಧ್ಯಾಪಕರ ತರಬೇತಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನದ ತರಬೇತಿಗೆ ಹೆಚ್ಚು ಹೆಚ್ಚು ಪ್ರೋತ್ಸಾಹಿಸಲು ಸಲಹೆ ನೀಡಿದೆ. ಅಷ್ಟೇ ಅಲ್ಲದೆ ಪದವಿ ತರಗತಿಗಳ ಶಿಕ್ಷಣ ಅವಧಿಯನ್ನು ಮೂರು ವರ್ಷಗಳಿಗೆ ಮಿತಗೊಳಿಸಬೇಕು. ಪ್ರಾಂತೀಯ ಸರ್ಕಾರಗಳೇ ವಿಶ್ವವಿದ್ಯಾಲಯಗಳ ಆಡಳಿತವನ್ನು ನಿರ್ವಹಿಸಬೇಕು ಎಂದು ಇಲ್ಲಿ ಸೂಚಿಸಲಾಗಿದೆ.

**ಹಾರ್ಟಾಗ್ ಆಯೋಗ (1929)**

ಭಾರತದಲ್ಲಿನ ರಾಜಕೀಯ ಆಂದೋಲನದ ಪರಿಣಾಮವಾಗಿ ಬ್ರಿಟಿಷ್ ಸರ್ಕಾರವು 1929 ರಲ್ಲಿ ಸೈಮನ್ ಆಯೋಗವನ್ನು ಸ್ಥಾಪಿಸಲಾಯಿತು. ಈ

ಆಯೋಗವು ಭಾರತದಲ್ಲಿನ ಶಿಕ್ಷಣದ ಪರಿಸ್ಥಿತಿಯನ್ನು ಕುರಿತು ಅಧ್ಯಯನ ಮಾಡುವುದಕ್ಕಾಗಿ ಸರ್. ಪಿಲೀಪ್ ಹಾರ್ಟಾಗ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿಗೆ ಹಾರ್ಟಾಗ್ ಸಮಿತಿ (ಆಯೋಗ) ಎಂದು ಕರೆಯಲಾಯಿತು. ಈ ಸಮಿತಿಯು 1929 ರ ಸೆಪ್ಟಂಬರ್ ತಿಂಗಳಲ್ಲಿ ಶಿಕ್ಷಣದ ವಿವಿಧ ಅಂಶಗಳ ಕುರಿತು ಸವಿವರವಾದ ವರದಿಯೊಂದಿಗೆ ಕೆಲವು ಶಿಫಾರಸ್ಸುಗಳ ಮೂಲಕ ಸೈಮನ್ ಆಯೋಗಕ್ಕೆ ಸಲ್ಲಿಸಿತು. ಈ ಆಯೋಗವು ಉನ್ನತ ಶಿಕ್ಷಣಕ್ಕೆ ಹೆಚ್ಚಿನ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಸೂಚಿಸಿತು. ಹಾಗೂ ಶಿಕ್ಷಣಕ್ಕೆ ಬೇಕಾದ ಗ್ರಂಥಾಲಯಗಳಂತಹ ಸಂಪನ್ಮೂಲಗಳನ್ನು ಸುಧಾರಿಸಲು ಸಲಹೆ ನೀಡಿತು.

**ಸಾರ್ಜೆಂಟ್ ಆಯೋಗ (1944)**

ಎರಡನೇ ಮಹಾಯುದ್ಧದ ನಂತರದಲ್ಲಿ ಭಾರತ ಸರ್ಕಾರವು ಶಿಕ್ಷಣವನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಹಾಗೂ ಶಿಕ್ಷಣದ ಪುನರ್ ವ್ಯವಸ್ಥೆಗಾಗಿ ಹಲವು ಯೋಜನೆಗಳನ್ನು ಸಿದ್ಧಗೊಳಿಸುವಾಗ ಕೇಂದ್ರ ಸರ್ಕಾರದ ಶಿಕ್ಷಣ ಸಲಹೆಗಾರರಾಗಿದ್ದ ಸರ್. ಜಾನ್ ಸಾರ್ಜೆಂಟ್ ರವರ ನೇತೃತ್ವದಲ್ಲಿ ಶಿಕ್ಷಣ ಅಭಿವೃದ್ಧಿಗೆ ಈ ಆಯೋಗವನ್ನು ರಚಿಸಲಾಯಿತು. ಈ ಆಯೋಗ ರಚಿಸಿದ ವರದಿಯು ಮುಖ್ಯವಾಗಿ ಶಿಕ್ಷಣದ ಬೆಳವಣಿಗೆಗೆ ಯಾವೆಲ್ಲ ಸಮಸ್ಯೆಗಳು ಅಡ್ಡಿಯುಂಟುಮಾಡುತ್ತಿವೆ ಎಂಬುದನ್ನು ಅಧ್ಯಯನ ಮಾಡಿ ಒಟ್ಟು ಹನ್ನೆರಡು ಅಧ್ಯಾಯಗಳನ್ನು ಒಳಗೊಂಡ ಒಂದು ವರದಿಯನ್ನು ರಚಿಸಿತು. ಈ ವರದಿಯಲ್ಲಿ ಶಿಕ್ಷಣಾಭಿವೃದ್ಧಿಗೆ ಸಂಬಂಧಿಸಿದಂತೆ ಕೆಲವು ಶಿಫಾರಸುಗಳನ್ನು ಈ ವರದಿ ನೀಡಿರುವುದನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ಶಿಕ್ಷಣದಲ್ಲಿ ದೈಹಿಕ ಶಿಕ್ಷಣ ಹಾಗೂ ಆರೋಗ್ಯ ಶಿಕ್ಷಣವನ್ನು ಕಡ್ಡಾಯಗೊಳಿಸಬೇಕು. ಮನರಂಜನೆ ಹಾಗೂ ಸಾಮಾಜಿಕ ಚಟುವಟಿಕೆಗಳಿಗೆ ಹೆಚ್ಚಿನ ಅವಕಾಶ ನೀಡಬೇಕು. ಮತ್ತು 6 ರಿಂದ 14 ವರ್ಷದ ಮಕ್ಕಳಿಗೆ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕವಾಗಿ ಕಡ್ಡಾಯಗೊಳಿಸುವಂತೆ ಸಲಹೆಯನ್ನು ನೀಡಿದೆ.

**ಉಪಸಂಹಾರ**

ನಮ್ಮ ಭಾರತ ದೇಶದಲ್ಲಿ ವೇದಗಳ ಕಾಲದಿಂದಲೂ ಮಹಿಳೆಯರಿಗೆ ಪ್ರತಿಯೊಂದು ಕ್ಷೇತ್ರದಲ್ಲೂ ಪುರುಷರಿಗೆ ಸರಿಸಮಾನವಾದ ಅವಕಾಶವನ್ನು ನೀಡಲಾಗಿತ್ತು ಎಂಬುದನ್ನು ಈಗಾಗಲೇ ನಮ್ಮ ಕೆಲವು ಗ್ರಂಥಗಳಲ್ಲಿ ನೋಡಬಹುದಾಗಿದೆ. 1400 ರಿಂದ 1854 ರಲ್ಲಿ ಕ್ರೈಸ್ತ ಮಿಷನರಿಗಳು ಭಾರತದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಾಕಷ್ಟು ಮಹತ್ವವನ್ನು ಕೊಟ್ಟು ಹೆಚ್ಚಿನ ಪ್ರೋತ್ಸಾಹ ನೀಡಿದರು. ಹಾಗೆ ಭಾರತೀಯ ಸಮಾಜ ಸುಧಾರಕರಾದ ಜ್ಯೋತಿಬಾಪುಲೆ, ಸಾವಿತ್ರಿಬಾಯಿ ಪುಲೆ, ಅಂಬೇಡ್ಕರ್, ರಾಜಾರಾಮ್ ಮೋಹನ್ ರಾಯ್ ಮುಂತಾದವರು ಮಹಿಳಾ ಶಿಕ್ಷಣಕ್ಕೆ ಹೋರಾಡಿದರು. ಇದರಿಂದಾಗಿ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನವನ್ನು ಬದಲಾಯಿಸುವಲ್ಲಿ ಶಿಕ್ಷಣವು ಪ್ರಮುಖ ಪಾತ್ರ ವಹಿಸಿತು. ಸ್ವಾತಂತ್ರ್ಯದ ನಂತರ ಮಹಿಳಾ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಯಿತು. ಆದ್ದರಿಂದಾಗಿ ಮಹಿಳೆಯು ಕುಟುಂಬದ ಒಳಗೆ ಮತ್ತು ಹೊರಗೆ ಜವಾಬ್ದಾರಿಯುತ ಸ್ಥಾನವನ್ನು ಪಡೆಯಲು ಸಾಧ್ಯವಾಗಿದೆ. ಮಹಿಳೆಯರಿಗೆ ಶಿಕ್ಷಣವನ್ನು ನೀಡುವುದರಿಂದ ಕೇವಲ ಮಹಿಳೆ ಮಾತ್ರ ಅಭಿವೃದ್ಧಿಯಾಗುತ್ತಾಳೆ ಎಂದರೆ ತಪ್ಪಾಗುತ್ತದೆ. ಒಬ್ಬ ಮಹಿಳೆ ಶಿಕ್ಷಣ ಪಡೆಯುವುದರಿಂದ ಕುಟುಂಬದ ಬೆಳವಣಿಗೆಗೆ ಹಾಗೂ ಅಭಿವೃದ್ಧಿಗೆ ಅನುಕೂಲವಾಗುತ್ತದೆ. ಶಿಕ್ಷಣ ಪಡೆದ ಮಹಿಳೆಯು ಕುಟುಂಬವನ್ನು ದಕ್ಷತೆಯಿಂದ ನಿರ್ವಹಿಸುವುದರೊಂದಿಗೆ ಕುಟುಂಬದ ಅಭಿವೃದ್ಧಿಗೆ ಸಹಕಾರಿಯಾಗುತ್ತಾಳೆ.

ಪ್ರಸ್ತುತ ಸಮಾಜದಲ್ಲಿ ಮಹಿಳೆಯರು ಶಿಕ್ಷಣ ಪಡೆಯಲು ಹಾಗೂ ಉತ್ತಮ ಸ್ಥಾನಮಾನವನ್ನು

ಹೊಂದಲು ಒಬ್ಬರಿಗೊಬ್ಬರು ಪೈಪೋಟಿ ನಡೆಸುತ್ತಿರುವುದನ್ನು ಕಾಣಬಹುದಾಗಿದೆ. ಇದರಿಂದಾಗಿ ಮಹಿಳೆಯರು ವೇತನಕ್ಕಾಗಿ ಕುಟುಂಬದ ಹೊರಗಡೆ ಬಂದು ದುಡಿಯುತ್ತಿರುವುದನ್ನು ಕಾಣಬಹುದಾಗಿದೆ. ಕಾರಣ ಇವರು ಪಡೆದಿರುವ ಶಿಕ್ಷಣವು ಇವರಲ್ಲಿ ಆತ್ಮಗೌರವವನ್ನು ಹೆಚ್ಚಿಸಿರುವುದನ್ನು ನಾವು ಕಾಣಬಹುದಾಗಿದೆ. ಇದರಿಂದಾಗಿ ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ. ಇದರಿಂದಾಗಿ ಮಹಿಳೆಯರ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಾನಮಾನವು ಸಾಮಾಜಿಕ ಅಭಿವೃದ್ಧಿಯ ಸೂಚ್ಯಾಂಕವಾಗಿದೆ.

**ಪರಾಮರ್ಶನ ಗ್ರಂಥಗಳು**


- ಹೇಮಲತಾ ಎಚ್.ಎಂ. *ಮಹಿಳಾ ಅಧ್ಯಯನ.* ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ.
- ಇಬ್ರಾಹಿಂ ಸಯ್ಯದ್. *ಮಹಿಳೆ ಮತ್ತು ಸಮಾಜ.* ಶಾಂತಿ ಪ್ರಕಾಶನ.
- ಇಂದಿರಾ ಜೈಪ್ರಕಾಶ್. *ಸ್ತ್ರೀವಾದಿ ಮನೋವಿಜ್ಞಾನ.* ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ.
- ಸತೀಶ ಎಂ.ಈ. *ಸ್ತ್ರೀವಾದ ಮತ್ತು ಭಾರತೀಯತೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಸುಮಿತ್ರಬಾಯಿ ಬಿ. ಎನ್. *ಸ್ತ್ರೀವಾದ ಒಂದು ಅವಲೋಕನ.* ಬಂಡಾರ ಪ್ರಕಾಶನ.